**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**
**ತಿ. ನರಸೀಪುರ**

**ಸಿ ಸಿ ಸಂಖ್ಯೆ: 135/2019.**

**ಆಪಾದನೆ**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ತಿ. ನರಸೀಪುರ ಆದ ನಾನು

1. ತಮ್ಮಯ್ಯ ಬಿನ್ ಲೇ ಶಿವಪ್ಪ
   38 ವರ್ಷ, ವಾಸಃ ದಡದಹಳ್ಳಿ ಗ್ರಾಮ,
   ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.

2. ಭೈರನಾಯಕ ಬಿನ್ ಲೇ ಮಾದನಾಯಕ
   51 ವರ್ಷ, ವಾಸಃ ಮಧ್ಯ ನಾಯಕರ ಬೀದಿ,
   ತಿ. ನರಸೀಪುರ ಪಟ್ಟಣ.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ಆಪಾದನೆ ಏನೆಂದರೆ–

ದಿನಾಂಕ : 28.03.2018 ರಂದು ಸಂಜೆ 7.00 ಗಂಟೆ ಸಮಯದಲ್ಲಿ, ತಿ.ನರಸೀಪುರ ಪೊಲೀಸ್ ಠಾಣೆ ವ್ಯಾಪ್ತಿಯ, ತಿ. ನರಸೀಪುರ ತಾಲ್ಲೂಕಿನ ಮಾದಾಪುರ ಗ್ರಾಮದ ಬಳಿ ಮನಿಯಮ್ಮಶೆಟ್ಟಿರವರ ಜಮೀನಿನ ಬಳಿ ತಲಕಾಡು – ತಿ. ನರಸೀಪುರ ಮುಖ್ಯ ರಸ್ತೆಯಲ್ಲಿ 1 ನೇ ಆರೋಪಿಯಾದ ನೀವು ಸಂಖ್ಯೆ ಇರುವ ಪ್ಲೇಟ್ ಅಳವಡಿಸದೇ ತಾತ್ಕಾಲಿಕ ಸಂಖ್ಯೆ ಕೆಎ–55–ಎನ್‌ಟಿ–003273/2017–2018 ರ ಟ್ರಾಕ್ಟರ್‌ನ್ನು ತಲಕಾಡು ಕಡೆಯಿಂದ ತಿ. ನರಸೀಪುರ ಕಡೆಗೆ ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿ ಎದುರಿಗೆ ಬರುತ್ತಿದ್ದ ಮೋಟಾರ್ ಸೈಕಲ್ ಸಂಖ್ಯೆ ಕೆಎ–09–ಇಬಿ–3434 ಕ್ಕೆ ಢಿಕ್ಕಿ ಮಾಡಿ, ಅದರ ಸವಾರ ಗೋವಿಂದರಾಜು ಮತ್ತು ಹಿಂಬದಿಯ

ಸವಾರ ನಿಂಗರಾಜುರವರಿಗೆ ತೀವ್ರ ಸ್ವರೂಪದ ಗಾಯಪಡಿಸಿ ಅವರ ಮರಣ ಉಂಟು ಮಾಡಿದ್ದು, ಅಪಘಾತವಾದ ನಂತರ ಗಾಯಾಳುವಿಗೆ ಚಿಕಿತ್ಸೆ ಕೊಡಿಸದೆ, ಪೊಲೀಸ್ ಠಾಣೆಗೆ ಮಾಹಿತಿ ನೀಡದೆ ಮತ್ತು ವಾಹನವನ್ನು ಸ್ಥಳದಲ್ಲಿ ಬಿಟ್ಟು ಹೋಗುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.279, 304–ಎ ಮತ್ತು ಮೋಟಾರು ವಾಹನ ಕಾಯ್ದೆ ಕಲಂ 177, 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

2 ನೇ ಆರೋಪಿಯಾದ ನೀವು ಸದರಿ ಟ್ರ್ಯಾಕ್ಟರನ ಮಾಲೀಕರಾಗಿದ್ದು, ಅದಕ್ಕೆ ಸಂಖ್ಯೆಯಿರುವ ಪ್ಲೇಟ್ ಅಳವಡಿಸದೇ ಅದನ್ನು 1 ನೇ ಆರೋಪಿಗೆ ಚಾಲನೆ ಮಾಡಲು ಅವಕಾಶ ಮಾಡಿಕೊಡುವ ಮೂಲಕ ಮೋಟಾರು ವಾಹನ ಕಾಯ್ದೆ ಕಲಂ 177 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ ಹೌದು.

ಪ್ರಶ್ನೆಃ ನೀವು ಸದರಿ ಆಪಾದನೆಯನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕಃ 11.01.2024.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ತಿ.ನರಸೀಪುರ.